3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಚನ್ನರಾಯಪಟ್ಟಣ

## CC 1084/2019

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಡಾ. ಶಿವಸ್ವಾಮಿ | **C.W – 7** |
| ತಂದೆಯ ಹೆಸರು | ಃ | ನಿಂಗೇಗೌಡ | **P.W – 6** |
| ವಯಸ್ಸು | ಃ | 55 ವರ್ಷ | |
| ಉದ್ಯೋಗ | ಃ | ಜಿಲ್ಲಾ ಆರೋಗ್ಯ ಮತ್ತು ಕಲ್ಯಾಣ ಅಧಿಕಾರಿ , ಹಾಸನ | **ಪ್ರಮಾಣ ವಚನ ಬೋಧಿಸಲಾಯಿತು.** |
| ವಾಸ | ಃ | ಹಾಸನ | ದಿನಾಂಕಃ **15.03.2025** |

ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

ನಾನು **2014** ರಿಂದ **2022**ರವರೆಗೆ ಹಿರಿಸಾವೆ ಸರ್ಕಾರಿ ಆಸ್ಪತ್ರೆಯಲ್ಲಿ ಆಡಳಿತ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿವರ್ಹಿರುತ್ತೇನೆ .

ದಿಃ **26.05.2019** ರಂದು ಸಂಜೆ ಸುಮಾರು **05.10** ಗಂಟೆಯ ಸಮಯದಲ್ಲಿ ಚಾಸಾ-**1** ರವರನ್ನು ಹಲ್ಲೆಯ ಹಿನ್ನಲೆಯಲ್ಲಿ ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತದೆ.

1. ತಲೆಯ ಬಲಭಾಗದಲ್ಲಿ ನೋವಿನಿಂದ ಕೂಡಿದ ಗಾಯ.

2. ಎಡಭುಜದಲ್ಲಿ ನೋವು.

ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ.

ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿ ಪಿ **3**ಎಂದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿ ಪಿ **3** (ಎ) ಎಂದು ಗುರುತಿಸಲಾಯಿತು.

ದಿಃ **26.05.2019** ರಂದು ಸಂಜೆ ಸುಮಾರು **05.00** ಗಂಟೆಯ ಸಮಯದಲ್ಲಿ ಚಾಸಾ-**2** ರವರನ್ನು ಹಲ್ಲೆಯ ಹಿನ್ನಲೆಯಲ್ಲಿ ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತದೆ.

**1.** ಬಲಭುಜದಲ್ಲಿ ನೋವು.

ಸದರಿ ಗಾಯವು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ.

ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿ ಪಿ **4** ಎಂದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿ ಪಿ **4** (ಎ) ಎಂದು ಗುರುತಿಸಲಾಯಿತು.

ನಿ ಪಿ 3 ಮತ್ತು 4ರಲ್ಲಿ ಕಂಡು ಬಂದಂತಹ ಗಾಯಗಳು ಯಾವುದೇ ಒಬ್ಬ ವ್ಯಕ್ತಿ ಎಂ ಒ **1** ರಿಂದ **3**ರಲ್ಲಿ ಹಲ್ಲೆ ಮಾಡಿದ ಸಂದರ್ಭದಲ್ಲಿ ಆಗಿರುವ ಸಾಧ್ಯತೆ ಇರುತ್ತದೆ.

**ಪಾಟಿ ಸವಾಲುಃ ಶ್ರೀ ಡಿ ಕೆ ಎಂ ಆರೋಪಿತರ ಪರ ವಕೀಲರಿಂದ**

ಚಾ ಸಾ **1** ಮತ್ತು **2**ರವರ ಜೊತೆ ಆಸ್ಪತ್ರೆಗೆ ಯಾರು ಬಂದಿರುತ್ತಾರೆ ಎಂದು ನನಗೆ ನೆನಪಿಲ್ಲ. ಚಾ ಸಾ **1** ಮತ್ತು **2**ರವರಿಗೆ ಯಾರು ಹಲ್ಲೆ ಮಾಡಿರುತ್ತಾರೆ ಎಂದು ನನಗೆ ತಿಳಿಸಿಲ್ಲ ಮತ್ತು ನಿ ಪಿ **3** ಮತ್ತು **4**ರಲ್ಲಿ ಅದರ ಬಗ್ಗೆ ನಮೂದಿಸಿಲ್ಲ. ಚಾ ಸಾ **1** ಮತ್ತು **2**ರವರ ಹೇಳಿಕೆಯನ್ನು ಪಡೆದುಕೊಂಡು ಅವರನ್ನು ಪರೀಕ್ಷಿಸಿ ಎಂ ಎಲ್ ಸಿ ವರದಿಯನ್ನು ತಯಾರಿಸಿರುತ್ತೇವೆ. ಪೋಲೀಸರಿಗೆ ಆರಕ್ಷಕ ಸೂಚಕ ವಹಿಯನ್ನು ನೀಡಿರುತ್ತೇವೆ. ಪೋಲೀಸರು ನನ್ನ ಸಮಕ್ಷಮ ಚಾ ಸಾ **1** ಮತ್ತು **2**ರವರ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಚಾ ಸಾ **1** ಮತ್ತು **2**ರವರ ಕ್ಷ-ಕಿರಣ ಪರೀಕ್ಷೆಯನ್ನು ಮಾಡಿಸಿಲ್ಲ.

**CW7 - PW6**

ಚಾ ಸಾ 1 ಮತ್ತು 2ರವರನ್ನು ಯಾವ ದಿನಾಂಕದಂದು ಆಸ್ಪತ್ರೆಯಿಂದ ಬಿಡುಗಡೆಗೊಳಿಸಿದ್ದೀರಾ ಎಂದರೆ ಸಾಕ್ಷಿಯು ದಾಖಲಾತಿಯನ್ನು ತೆಗೆದು ನೋಡಬೇಕಾಗುತ್ತದೆ, ಸಾಕ್ಷಿ ಮುಂದುವರೆದು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದರಿಂದ ಅದೇ ದಿನ ಬಿಡುಗಡೆಗೊಳಿಸಿರಬಹುದು ಎನ್ನುತ್ತಾರೆ. ಚಾ ಸಾ 1 ಮತ್ತು 2ರವರು ಆಸ್ಪತ್ರೆಗೆ ಬಂದಾಗ ಅವರ ಬಟ್ಟೆಯಲ್ಲಿ ರಕ್ತದ ಕಲೆ ಇರಲಿಲ್ಲ. ಯಾವುದೇ ಒಬ್ಬ ವ್ಯಕ್ತಿ ನಡೆದುಕೊಂಡು ಹೋಗಬೇಕಾದರೆ ಮಗುಚಿ ಬಿದ್ದಲ್ಲಿ ನಿ ಪಿ 3 ಮತ್ತು 4ರಲ್ಲಿ ನಮೂದಿಸಿದಂತಹ ಗಾಯಗಳು ಆಗುವಂತಹ ಸಾಧ್ಯತೆಗಳು ಇವೆ ಎಂದರೆ ಸರಿ. ಚಾ ಸಾ 1 ಮತ್ತು 2ರವರಿಗೆ ಯಾವುದೇ ಹಲ್ಲೆ ಆಗದೇ ಇದ್ದರೂ ಸಹ ಆರೋಪಿತರಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ಪೋಲೀಸರು ಮತ್ತು ನನ್ನ ಜೊತೆ ಶರೀಕ್ಕಾಗಿ ಚಾ ಸಾ 1 ಮತ್ತು 2ರವರಿಗೆ ಸಹಾಯವಾಗಲೆಂಬ ಉದ್ದೇಶದಿಂದ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**Sd/-**

3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ಚನ್ನರಾಯಪಟ್ಟಣ